136

ಕರ್ನಾಟಕ ಸರ್ಕಾರ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ

C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001,ಕರ್ನಾಟಕ

E-mail ID: icps.kar@gmail.com Ph.No.080-22879381/82

ಸಂಖ್ಯೆ: ಕಿಎಸ್‌ಐಸಿಪಿಎಸ್/ಮರ/W.P.10208/18-44/2020-21 ದಿ:26.08.2020

ಜಿಲ್ಲಾಧಿಕಾರಿಗಳು ಹಾಗೂ ಮಹಾ ದಂಡಾಧಿಕಾರಿಗಳು,
ಜಿಲ್ಲಾಧಿಕಾರಿಗಳ ಕಛೇರಿ,
ಎಲ್ಲಾ ಜಿಲ್ಲೆಗಳು.

ಮಾನ್ಯರೆ,

ವಿಷಯ: ತ್ರೈಮಾಸಿಕ ವರದಿಗಳ ಕುರಿತು W.P No.10208/18ರ ಆದೇಶದಲ್ಲಿ ನೀಡಿದ ನಿರ್ದೇಶನಗಳನ್ನು ಪಾಲಿಸುವ ಬಗ್ಗೆ.

ಉಲ್ಲೇಖ: 1. ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ 10208/18ಗೆ ದಿ: 22.07.2020ರಂದು ಹೊರಡಿಸಿದ ಆದೇಶ
2. ಈ ಕಛೇರಿಯ ಪತ್ರ ಸಂಖ್ಯೆ: ಕಿಎಸ್‌ಐಸಿಪಿಎಸ್/ಮರ/W.P.10208/18-44/2020-21. ದಿ:26.08.2020

* * * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ಮಾನ್ಯ ಉಚ್ಚ ನ್ಯಾಯಾಲಯದ ದಿ:22.07.2020ರ ಆದೇಶದಲ್ಲಿ ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ), ಕಾಯ್ದೆ, 2015ರ ಕಲಂ 36 ರ ಉಪವಿಭಾಗಗಳು (4) ಮತ್ತು (5) ರಂತೆ ಕ್ರಮ ಕೈಗೊಳ್ಳುವ ಕುರಿತು ನಿರ್ದೇಶನ ನೀಡಿರುತ್ತದೆ. ಅದರಂತೆ, ಸೆಕ್ಷನ್ 36ರ ಉಪವಿಭಾಗ (4)ರಲ್ಲಿನ ಉಲ್ಲೇಖದಂತೆ, ಪ್ರಕರಣಗಳ ವಿಲೇವಾರಿ ಮತ್ತು ಪ್ರಕರಣಗಳ ಬಾಕಿ ಇರುವ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿಯು ತ್ರೈಮಾಸಿಕ ವರದಿಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟರುಗಳಿಗೆ ಸಲ್ಲಿಸಬೇಕು ಎಂದು ಆದೇಶಿಸಿ, ಸೆಕ್ಷನ್ 36ರ ಉಪವಿಭಾಗ (5)ರ ಅವಶ್ಯಕತೆಗಳನ್ನು ಅನುಸರಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮುಂದಿನ ನಿರ್ದೇಶನ ನೀಡಲು ಆದೇಶಿಸಿದೆ.

ಅದರಂತೆ, ಉಲ್ಲೇಖ (2)ರ ಪತ್ರದಲ್ಲಿ ಎಲ್ಲಾ ಜಿಲ್ಲೆಗಳ ಅಧ್ಯಕ್ಷರು, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಇವರಿಗೆ ನಿಗದಿತ ನಮೂನೆ 16 (Rules 17 (1)(v) and 20(2)ಯಲ್ಲಿ ಮಾಹಿತಿಯನ್ನು ಪ್ರತಿ ತ್ರೈಮಾಸಿಕ ಮಾಹೆಯು ಅಂತ್ಯಗೊಂಡ ನಂತರದ ಮೊದಲನೇ ವಾರದ ಒಳಗೆ ತಮ್ಮ ಕಛೇರಿಗೆ ಸಲ್ಲಿಸಲು ಸೂಚಿಸಿದೆ (ಪ್ರತಿ ಲಗತ್ತಿಸಿದೆ). ಜಿಲ್ಲೆಗಳ ಅಧ್ಯಕ್ಷರು, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಇವರು ಸಲ್ಲಿಸುವ ತ್ರೈಮಾಸಿಕ

ವರದಿಯನ್ನು ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ), ಕಾಯ್ದೆ, 2015ರ ಕಲಂ 36 ರ ಉಪವಿಧಾನಗಳು (5) ರಲ್ಲಿ ಕೆಳಗೆ ಉಲ್ಲೇಖಿಸಿದಂತೆ ಕ್ರಮ ವಹಿಸಲು ಸೂಚಿಸಿದೆ.

"After review under sub-section (4), the District Magistrate shall direct the Committee to take necessary remedial measures to address the pendency, if necessary and send a report of such reviews to the State Government, who may cause the constitution of additional Committees, if required:

Provided that if the pendency of cases continues to be unaddressed by the Committee even after three months of receiving such directions, the State Government shall terminate the said Committee and shall constitute a new Committee."

ಕೆಲವು ಜಿಲ್ಲೆಗಳಲ್ಲಿ ಜಿಲ್ಲಾ ದಂಡಾಧಿಕಾರಿಗಳು ಮತ್ತು ಮಕ್ಕಳ ಕಲ್ಯಾಣ ಸಮಿತಿಗಳನ್ನು ಪರಿಶೀಲನೆ ಮಾಡಿಲ್ಲದಿರುವ ಬಗ್ಗೆ ಉಲ್ಲೇಖ (1)ರ ಪ್ಯಾರಾ 15 ರಲ್ಲಿ ಕೆಳಗಿನಂತೆ ಉಲ್ಲೇಖಿಸಿರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

"it is a statement of review of CWCs undertaken by the District Magistrates in accordance with sub-section (5) of Section 36. As noted earlier, review is contemplated on the basis of quarterly reports of every quarter. However, we find from Annexure-R9 that in case of many Districts, review has not been conducted by the District Magistrates and that is why we have issued the aforesaid directions regarding strict implementation of sub-sections (4) and (5) of Section 36 of the JJ Act."

ಆದ್ದರಿಂದ, ಮೇಲ್ಕಂಡಂತೆ ಕ್ರಮವಹಿಸಿ, ತ್ರೈಮಾಸಿಕ ವರದಿಗಳನ್ನು ಪರಿಶೀಲಿಸಿ ಈ ಕಛೇರಿಗೆ ಅನುಪಾಲನೆಯನ್ನು ಸಲ್ಲಿಸಲು ಕೋರಿದೆ.

ತಮ್ಮ ವಿಶ್ವಾಸಿ,

೨೬.೦೮.೨೦೨೦

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು

E/Letter WP No.10208-18